**ಜಗದ್ಗುರುಂ ಕೃಪಾಸಿಂಧುಂ ಶರಣಾಗತ ವತ್ಸಲಂ**
**ಭಕ್ತಮಾನಸ ಸಂಚಾರಂ ಮಹೀಪತಿ ಗುರುಂ ಭಜೇ**
**ಸ್ವಭಕ್ತಾನುಗ್ರಹಾರ್ಥಾಯ ಸಾಮೀಪ್ಯಾತ್ ಧ್ರುವಮಾಗತಾನ್**
**ಮಹೀಪತಿಗುರೂನ್ ವಂದೇ ಸರ್ವವಿದ್ಯಾವಿಶಾರದಾನ್ ।**

| | | |
|---|---|---|
| ಕಾಲ | : | ಕ್ರಿ ಶ **1611 - 1682** |
| ವ್ಯವಹಾರನಾಮ | : | ಮಹೀಪತಿರಾಯರು |
| ಅಂಕಿತ | : | ಮಹಿಪತಿ |
| ಉಪದೇಶಗುರು | : | ಸಾರವಾಡದ ಭಾಸ್ಕರಸ್ವಾಮಿಗಳು |
| ಸ್ಥಳ | : | ಕಾಖಂಡಕಿ |
| ಪುಣ್ಯತಿಥಿ | : | ಕಾರ್ತೀಕ ಬಹುಳ ಅಮಾವಾಸ್ಯೆ |

ಮಹಿಪತಿದಾಸರ ಪ್ರಸಿದ್ಧ ಹಾಡುಗಳು

ರಾ ಗ – ಮ ಲ ಯ ಮಾ ರು ತ : ತಾ ಳ – ಆ ದಿ ತಾ ಳ

ಪಾಹಿಮಾಂ ಪಾಹಿ ಶಿವಹರ ಮೃಡ ಶಂಭೊ । ಪ ।

ಅದ್ರಿಧರಪ್ರಿಯ ಅದ್ರಿಕೃತಾಲಯ
ಅದ್ರಿಜಾಮಾತಾದ್ರಿರಿಪುನುತ
ಅದ್ರಿಜೆಪತಿ ಪಾಪಾದ್ರಿಕುಲಿಶ ಕನ
ಕಾದ್ರಿ ಶರಾಸನಮುದ್ರಿತಪಾಣಿ । ೧ ।

ಉನ್ಮತದಿಂದಲಿ ಮನ್ಮಥ ಬರಲು
ದಹನಮಾಡಿದ ಷಣ್ಮುಖಜನಕನೆ
ಉನ್ಮನಯೋಗಿ ಸನ್ನುತಲೀಲ
ಜನ್ಮರಹಿತ ಘನಚಿನ್ಮಯರೂಪ ।೨।

ಭರಿಸಿದ ಗಂಗೆಯನಿರಿಸಿದೆ ಜಡೆಯೊಳು
ಧರಿಸಿದೆ ಚಂದ್ರನ ಮೆರೆಸಿದೆ ಭಕ್ತರ
ಗುರುಮಹಿಪತಿಯಂಕುರಿಸಿದ ಬಾಲನ
ಸಿರಸದಲಿಡು ನಿಜಪರಸಾದ ಕೈಯ ।೩।

### ರಾಗ – ಪೀಲು : ತಾಳ – ದಾದರ

ನಮ್ಮಮ್ಮನ ಕಂಡೆ ಬೊಮ್ಮನ ಪಡೆದಿಹಳ ।ಧ್ರುವ।

ಅಮ್ಮನ ಕಂಡೆನಗೆ ಅಮೃತ ಪಾನವಾಯಿತು
ಸಂಭ್ರಮದಿಂದಲೆನಗೆ ಬ್ರಹ್ಮಾಂಡದೊಳು ।೧।

ಆಹ್ಲಾದವಾಯಿತಿಂದು ಫುಲ್ಲಲೋಚನೆಯ ಕಂಡು
ಉಲ್ಲಾಸ ತುಂಬಿತೆನಗೆ ಮೂರ್ಲೋಕದೊಳು ।೨।

ಮಾತೃ ಪಿತೃವೆಂಬುದು ಸೂತ್ರಧಾರಿ ತಾನೊಬ್ಬಳೆ
ಅಂತ್ರ ಬಾಹ್ಯದಲೆನಗೆ ಪುತ್ರ ಮಹಿಪತಿಗೆ ।೩।

## ರಾಗ – ಮೋಹನ : ತಾಳ – ಝಂಪೆ ತಾಳ

ಜಯ ಜಯ ಸರಸ್ವತಿ ಜಯವರ ಪೂರ್ಣಮತಿ
ತ್ರೈಲೋಕದಲಿ ಖ್ಯಾತಿ ಜಯ ಸುಕೀರ್ತಿ । ಧ್ರುವ ।
ವಿದ್ಯಾವರದಾಯಿನಿ ಸಿದ್ಧಿಗೆ ಶಿಖಾಮಣಿ
ಬುದ್ಧಿ ಪ್ರಕಾಶಿನಿ ಸದ್ಭೂಷಿಣೆ । ೧ ।
ಕರಕಮಲದಲಿ ವೀಣೆ ಸುರಸ ಅಮೃತವಾಣಿ
ವರವಿದ್ಯದಲಿ ದಾನಿ ಸುಪ್ರವೀಣೆ । ೨ ।
ಪ್ರಸನ್ನವದನಿ ವಿಶ್ವದಲಿ ನೀ ಪೂರ್ಣೆ
ಹಂಸವಾಹಿನಿ ಪೂರ್ಣೆ ಸ್ವಸಿದ್ಧಿಣೆ । ೩ ।
ಸದಾ ಸದ್ಗುರುಸ್ತುತಿ ಒದುಗುವ್ಹಾಂಗ ಸ್ಫೂರ್ತಿ
ಇದೇ ಮಹಿಪತಿ ಕುರ್ತಿ ಬೋಧಿಸು ಮತಿ । ೪ ।

## ರಾಗ – ಕಮಾಚ್ : ತಾಳ – ಆದಿ ತಾಳ

ಗುರು ಮಧ್ವಮುನಿರನ್ನ ಮೂರು ಪರಿಯದೋರಿದೆ ನಿನ್ನ
ಹರಿಭಕ್ತಿಯಲಿ ಅವಿಚ್ಛಿನ್ನ ಸರಿಯಾರು ಧರೆಯೊಳು ನಿನ್ನ
ಸ್ಮರಣೆಯಲಿಹೆ ರಾಮನ್ನ ಪರಮಪಾವನ್ನ । ೧ ।

ಅತಿಬಾಹು ಪರಾಕ್ರಮ ಕ್ಷಿತಿಯೊಳು ನಿನ್ನದೇ ನೇಮ
ಪ್ರಥಮಲ್ಯಾದೆ ಹನುಮ ದ್ವಿತಿಯಲ್ಯಾದೆ ಭೀಮ
ತೃತಿಯಲ್ಲಿ ಪೂರ್ಣ ಪ್ರಾಜ್ಞನೆನಿಸಿದೆ ನಿಸ್ಸೀಮ । ೨ ।

ಸಾಹ್ಯಕ್ಕೆ ಕಾರಣ ಮಹಾದೈತ್ಯರ ಮರ್ದನ
ಶ್ರೀಹರಿ ಸಾನ್ನಿಧ್ಯ ಪೂರ್ಣ ಇಹ ಸಕಲನಿಪುಣ
ಮಹಿಪತಿ ಮುಖ್ಯಪ್ರಾಣ ಸ್ವಹಿತ ಸಾಧನ ।@।

ರಾಗ – ತಿಲಂಗ : ತಾಳ – ಧುಮಾರಿ

ಹರಿನಾಮ ಘೋಷ ಹರಿನಾಮ ಘೋಷ ।ಧೃವ।

ಎಲ್ಲಿ ಹರಿನಾಮ ಘೋಷ ಅಲ್ಲಿ ಸಕಲ ಸುಖ ಸಂತೋಷ
ಸುಲಭಲಿಹುದು ಭವಭಯದ ನಾಶ ಹರಿನಾಮ ಘೋಷ ।೧।

ಹರಸುವದಾನಂದದ ಹರುಷ ಹರಿಸುವುದು ಕಲಿಮಲ ಕಲುಷ
ತ್ವರಿತೋಡಿಸುವುದು ಮಹಾಪಾತಕ ದೋಷ ಹರಿನಾಮ ಘೋಷ ।೨।

ಸ್ವಹಿತ ಸಾಧನದ ಸು ಉಪದೇಶ ಬಾಹ್ಯಾಂತರದೋರುವ ಪ್ರಕಾಶ
ಮಹಿಪತಿಗಿದೆ ನಿತ್ಯವನುಭವದುಲ್ಲಾಸ ಹರಿನಾಮ ಘೋಷ ।೩।

ಸಂಗ್ರಹ – ನರಹರಿ ಸುಮಧ್ವ